**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:57, ಸಿ.ವಿ.ರಾಮನ್‌ನಗರ**
**ವಾರ್ಡ್ ಸಮಿತಿ ಸಭೆ, ದಿನಾಂಕ:03-04-2021 ರ ಸಭಾ ನಡವಳಿಗಳು**

ದಿನಾಂಕ:03-04-2021 ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್-57 ಸಿ.ವಿ.ರಾಮನ್‌ನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ಭುವನೇಶ್ವರಿನಗರ ಪಾರ್ಕ್, ಸಿ.ವಿ.ರಾಮನ್‌ನಗರ ಇಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು**

| ಕ್ರಮ ಸಂ | ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು | ಪ್ರವರ್ಗ |
|---|---|---|
| 1 | ಶ್ರೀ.ರಂದೀಪ್.ಡಿ ಭಾ.ಆ.ಸೇ ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) | ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿರವರು |
| 2 | ಶ್ರೀಮತಿ.ಶಾಂತಾ ಬಾಡಗಂಡಿ | ಕಾರ್ಯದರ್ಶಿ |
| 3 | ಶ್ರೀ.ಸತ್ಯನಾರಾಯಣ, | ಸದಸ್ಯರು |
| 4 | ಶ್ರೀಮತಿ.ಸುಜಾತ | ಸದಸ್ಯರು |
| 5 | ಶ್ರೀಮತಿ.ಸಿಂಧು ಶ್ರೀಕುಮಾರ್ | ಸದಸ್ಯರು |
| 6 | ಶ್ರೀ.ಗುಣಶೇಖರ್ | ಸದಸ್ಯರು |
| 7 | ಶ್ರೀಮತಿ.ವೆಂಕಟಲಕ್ಷ್ಮಿ | ಸದಸ್ಯರು |
| 8 | ಶ್ರೀ.ಚಂದ್ರಹಾಸ್ | ಸದಸ್ಯರು |

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಸಿಬ್ಬಂಧಿಗಳು

1) ಕುಮಾರಿ.ಸಹನ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
2) ಶ್ರೀ.ಮನೋಹರ್ ಮಾರ್ಷಲ್
3) ಶ್ರೀ.ರಾಮಚಂದ್ರೇಗೌಡ ಟ್ರಾಫಿಕ್ ಪೋಲೀಸ್

ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳನ್ನು ಕಮಿಟಿಯ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವುದಕ್ಕೆ ಸ್ವಾಗತ ಕೋರಿದರು. ಸಭೆಯನ್ನು ಮುಂದುವರೆಸಲು ಸೂಚನೆ ನೀಡಿದ ನಂತರ, ಸಭೆಯನ್ನು ಆರಂಭಿಸಲಾಯಿತು.

**ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ | ಕೈಗೊಂಡ ಕ್ರಮ |
|---|---|---|---|
| I | **BBMP** | | |
| | **ಪ್ರಾಥಮಿಕ ಆರೋಗ್ಯ ಕೇಂದ್ರ (PHC)** | | |
| 1 | ಅಭಯ ಹಸ್ತ ಹಾಗೂ ಕಂಫರ್ಟ್ ಖಾಸಗೀ ಆಸ್ಪತ್ರೆಯಲ್ಲಿ ಕೋವಿಡ್ ಲಸಿಕಾ ಕೇಂದ್ರವನ್ನು ಶೀಘ್ರದಲ್ಲಿ ಪ್ರಾರಂಭಿಸುವುದಾಗಿ ತಿಳಿಸಲಾಯಿತು. | ವೈದ್ಯಾಧಿಕಾರಿಗಳು | ಪ್ರಾರಂಭಿಸಲಾಗಿರುತ್ತದೆ |
| | **ಘನತ್ಯಾಜ್ಯ ನಿರ್ವಹಣೆ (SWM)** | | |
| 1 | ಕಸ ಸಂಗ್ರಹಣೆ ವಾಹನಗಳಿಗೆ ಮೈಕ್‌ನ್ನು ಅಳವಡಿಸಲು ಸೂಚಿಸಲಾಯಿತು. | Junior Health Inspector | Pending |

ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ)
ಹಾಗೂ ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ- 57 ಸಿ.ವಿ ರಾಮನ್‌ನಗರ

Scanned with CamScanner

| | | | |
|---|---|---|---|
| 2 | ವರ್ಸೋವಾ ಲೇಔಟ್ ಹಿಂಬದಿಯಲ್ಲಿರುವ ಖಾಲಿ ಜಾಗದಲ್ಲಿ ಅನಧಿಕೃತ ಉದ್ದಿಮೆಗಳು ನಡೆಸುತ್ತಿದ್ದು. ಇದರಿಂದ ಶಬ್ಧ ಮಾಲಿನ್ಯ ಉಂಟಾಗುತ್ತಿದೆ ಹಾಗೂ ಕಾರ್ಮಿಕರ ಶೆಡ್‌ಗಳಿದ್ದು, ಸ್ವಚ್ಛತೆ ಕಾಪಾಡದೇ ತೊಂದರೆ ಉಂಟಾಗುತ್ತಿದೆ ಎಂದು ತಿಳಿಸಲಾಯಿತು. | **Senior Health Inspector** | ಬೆಸ್ಕಾಂ ಹಾಗೂ ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ಪತ್ರ ಬರೆಯಲಾಗಿದೆ. |
| 3 | ಭುವನೇಶ್ವರಿ ನಗರ ಪಾರ್ಕ್ ಕಗ್ಗದಾಸಪುರ ಮುಖ್ಯರಸ್ತೆಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಿಸಲು ಸ್ಥಳಗಳನ್ನು ಗುರುತಿಸುವಂತೆ ತಿಳಿಸಲಾಯಿತು. | **Junior Health Inspector** | **Pending** |
| | **ಆರೋಗ್ಯ ಇಲಾಖೆ (HEALTH DPTD)** | | |
| 1 | ವರ್ಸೋವಾ ಲೇಔಟ್ ಹಿಂಬದಿಯಲ್ಲಿರುವ ಖಾಲಿ ಜಾಗದಲ್ಲಿ ಅನಧಿಕೃತ ಉದ್ದಿಮೆಗಳು ನಡೆಸುತ್ತಿದ್ದು, ಇದರಿಂದ ಶಬ್ಧ ಮಾಲಿನ್ಯ ಉಂಟಾಗುತ್ತಿದೆ ಹಾಗೂ ಕಾರ್ಮಿಕರ ಶೆಡ್‌ಗಳಿದ್ದು, ಸ್ವಚ್ಛತೆ ಕಾಪಾಡದೇ ತೊಂದರೆ ಉಂಟಾಗುತ್ತಿದೆ ಎಂದು ತಿಳಿಸಲಾಯಿತು. ಸದರಿ ಸ್ಥಳದ ಪರಿವೀಕ್ಷಣೆ ಮಾಡಲಾಯಿತು. | **ಹಿರಿಯ ಆರೋಗ್ಯ ಪರಿವೀಕ್ಷಕರು** | |
| | **ಕಾಮಗಾರಿ ಇಲಾಖೆ (Engineering)** | | |
| 1 | ಸುದ್ದಗುಂಟೆ ಪಾಳ್ಯ ಮುಖ್ಯರಸ್ತೆ ಹಾಗೂ ಶಾಂತಮ್ಮ ಬಡಾವಾಣೆಗಳಲ್ಲಿ ಮಳೆ ನೀರಿನ ಚರಂಡಿಗಳಲ್ಲಿ ಹೂಳು ತುಂಬಿದ್ದು, ಹೂಳನ್ನು ತೆರವುಗೊಳಿಸಲು ಕೋರಲಾಯಿತು. | **Assistant Engineer-BBMP** | ಚರಂಡಿಗಳಲ್ಲಿ ಹೂಳು ತುಂಬಿದ್ದು, ಈಗಾಗಲೇ ಸದರಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಹೂಳನ್ನು ತೆರವುಗೊಳಿಸಲಾಗುವುದು. **(Longtime)** |
| 2 | ರಸ್ತೆ ಬದಿಯ ಪಾದಚಾರಿ ಮಾರ್ಗದ ಒತ್ತುವರಿ ತೆರವುಗೊಳಿಸಲು **'Footpath encroachment drive'** ಮಾಡುವಂತೆ ಸೂಚಿಸಲಾಯಿತು. | **Assistant Engineer-BBMP** | **Pending** |
| 3 | ಎಲ್ಲಮ್ಮ ದೇವಸ್ಥಾನ ಪಕ್ಕ ಮನೆಯ ಮೇಲೆ ಮೊಬೈಲ್ ಟವರ್ ಅಳವಡಿಸಿದ್ದು, ಇದರಿಂದ ತುಂಬಾ ತೊಂದರೆ ಆಗುತ್ತಿದ್ದು, ಕೂಡಲೇ ಇದನ್ನು ತೆರವುಗೊಳಿಸಲು ಕೋರಲಾಯಿತು. | **Assistant Engineer-BBMP** | ಕೆ.ಎಂ.ಸಿ ಕಾಯ್ದೆ ಅನ್ವಯ ನೋಟೀಸು ಜಾರಿಗೊಳಿಸಲಾಗಿದೆ. |
| 4 | ಸುದ್ದಗುಂಟೆ ಪಾಳ್ಯದಲ್ಲಿರುವ ಅಂಗನವಾಡಿ ಕೇಂದ್ರ ತುಂಬಾ ಶಿಥಿಲಗೊಂಡಿದ್ದು, ಇದನ್ನು ದುರಸ್ಥಿ ಪಡಿಸಲು ಕೋರಲಾಯಿತು. | **Assistant Engineer-BBMP** | ಪ್ರಗತಿಯಲ್ಲಿದೆ. |
| 5 | ಭುವನೇಶ್ವರಿನಗರದಲ್ಲಿ ಇರುವ ರಸ್ತೆಗುಂಡಿಗಳನ್ನು ಮುಚ್ಚಲು ಕ್ರಮ ವಹಿಸುವಂತೆ ಕೋರಲಾಯಿತು. | **Assistant Engineer-BBMP** | **Pending** |
| 6 | ವಾರ್ಡ್ ವ್ಯಾಪ್ತಿಯಲಿರುವ ರಸ್ತೆ ಗುಂಡಿಗಳನ್ನು ಮುಚ್ಚಿಸಲು ಕೋರಲಾಯಿತು. | **Assistant Engineer-BBMP** | **HMP** ವತಿಯಿಂದ ರಸ್ತೆ ಗುಂಡಿ ಮುಚ್ಚುವ ಗುತ್ತಿಗೆದಾರರ ಗುತ್ತಿಗೆಯನ್ನು ರದ್ದುಗೊಳಿಸಲಾಗಿದ್ದು, ಮುಂದಿನ ಕ್ರಮ ವಹಿಸಲಾಗುವುದು. |
| | **ತೋಟಗಾರಿಕಾ ಇಲಾಖೆ (Horticulture)** | | |
| 1 | ಭುವನೇಶ್ವರಿನಗರದಲ್ಲಿರುವ ಪಾರ್ಕ್ ಹತ್ತಿರವಿರುವ ಬೋರ್‌ವೆಲ್‌ನ್ನು ದುರಸ್ಥಿಗೊಳಿಸಲು ಕೋರಲಾಯಿತು ಹಾಗೂ ಸದರಿ ಪಾರ್ಕ್‌ನಲ್ಲಿರುವ **gym & children play equipment**ಗಳು ಹಾಳಾಗಿದ್ದು, ಅವುಗಳನ್ನು ಸರಿಪಡಿಸಿಕೊಡಲು ಕೋರಲಾಯಿತು. | **Assistant Engineer- SWD** | **Pending** |

ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ಬಿಬಿಎಂಪಿ
ಹಾಗೂ ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ- 57 ಸಿ.ವಿ ರಾಮನ್‌ನಗರ

Scanned with CamScanner

| | | | |
|---|---|---|---|
| | **ಬೀದಿ ದೀಪಗಳ ನಿರ್ವಹಣೆ (Street lights)** | | |
| 1 | ಕಗ್ಗದಾಸಪುರದ ಅನೇಕ ಬೀದಿಗಳಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿರುವುದಿಲ್ಲ ಎಂದು ದೂರಲಾಯಿತು. ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿರುವ ಸೋಡಿಯಮ್ ಲೈಟ್‌ಗಳನ್ನು ದುರಸ್ಥಿಪಡಿಸಿ, ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದರು. | **Assistant Engineer-Street light** | **Pending** |
| 2 | ಮಾರುತೀನಗರ ಅನೇಕ ಬೀದಿಗಳಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿರುವುದಿಲ್ಲ ಎಂದು ದೂರಲಾಯಿತು. | **Assistant Engineer-Street light** | ಪ್ರಗತಿಯಲ್ಲಿದೆ. |
| 3 | ಹಳೇ ಮದ್ರಾಸ್ ರಸ್ತೆಯಿಂದ ಸುದ್ದಗುಂಟೆ ಪಾಳ್ಯದವರೆಗಿನ ರಸ್ತೆಯಲ್ಲಿ ಒಂದೂ ಬೀದಿ ದೀಪ ಉರಿಯುತ್ತಿರುವುದಿಲ್ಲ ಎಂದು ದೂರಲಾಯಿತು. | **Assistant Engineer-Street light** | ಸೋಡಿಯಮ್ ಲೈಟ್‌ಗಳು ಉರಿಯುತ್ತಿದ್ದು, ಎಲ್.ಇ.ಡಿ ಲೈಟ್‌ಗಳ ಬದಲಾವಣೆ ಕಾರ್ಯ ಬಾಕಿ ಇರುತ್ತದೆ. |
| 4 | ವರ್ಸೋವಾ ಬಡಾವಣೆಯಲ್ಲಿನ ರಸ್ತೆಗಳಲ್ಲಿ ಬೀದಿ ದೀಪಗಳ ನಿರ್ವಹಣೆ ಸಮರ್ಪಕವಾಗಿರುವುದಿಲ್ಲ ಎಂದು ತಿಳಿಸಿದರು. | **Assistant Engineer-Street light** | **Pending** |
| 5 | ನಾಗವಾರ ಪಾಳ್ಯ ಮುಖ್ಯರಸ್ತೆ ಹಾಗೂ ಬಡಾವಣೆಯ ರಸ್ತೆಗಳಲ್ಲಿ ಬೀದಿ ದೀಪಗಳು ಉರಿಯುತ್ತಿರುವುದಿಲ್ಲವೆಂದು ತಿಳಿಸಿದರು | **Assistant Engineer-Street light** | **Pending** |
| 6 | ಬೀದಿ ದೀಪಗಳ ಕಂಬಗಳಿಗೆ "Automatic control" ಗಳನ್ನು ಅಳವಡಿಸಲು ಕೋರಲಾಯಿತು. | **Assistant Engineer-Street light** | **Pending** |
| 7 | ಅಟಲ್ ಬಿಹಾರಿ ವಾಜಪೇಯಿ ವಾಕಿಂಗ್ ಟ್ರಾಕ್‌ಲ್ಲಿ ಬೀದಿ ದೀಪಗಳು ಉರಿಯುತ್ತಿಲ್ಲವೆಂದು ದೂರಲಾಯಿತು. | **Assistant Engineer-Street light** | **Pending** |
| 8 | ವರ್ತೂರು ಮುಖ್ಯರಸ್ತೆಗಳಲ್ಲಿ ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿಲ್ಲವೆಂದು ದೂರಲಾಯಿತು. ಹಾಗೂ ಹಾಳಾಗಿರುವ ನಾಲ್ಕು ವಿದ್ಯುತ್ ಕಂಬಗಳನ್ನು ಪುನರ್‌ಸ್ಥಾಪಿಸಲು ಕೋರಲಾಯಿತು. | **Assistant Engineer-Street light** | **Pending** |
| 9 | ಹಳೇ ಮದ್ರಾಸ್ ರಸ್ತೆ ಹಾಗೂ ವರ್ತೂರು ರಸ್ತೆಯ ಜಂಕ್ಷನ್‌ನಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ **High mast** ನ್ನು ಅಳವಡಿಸಲು ಕೋರಲಾಯಿತು. | **Assistant Engineer-Street light** | **TRAFIC POLICE** ಇಲಾಖೆಯಿಂದ ಮನವಿ ಸಲ್ಲಿಸಿದ್ದು, ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. |
| 10 | ನೇತ್ರಾವತಿ ಬಡಾವಣೆಯಲ್ಲಿ ಬೀದಿ ದೀಪಗಳ ನಿರ್ವಹಣೆ ಸಮರ್ಪಕವಾಗಿಲ್ಲವೆಂದು ತಿಳಿಸಲಾಯಿತು. | **Assistant Engineer-Street light** | **Pending** |
| 11 | ವರ್ಸೋವಾ ಬಡಾವಣೆಯಲ್ಲಿ 6 ಹೊಸ ಬೀದಿ ದೀಪಗಳ ಕಂಬ ಹಾಗೂ ಉಪಕರಣಗಳನ್ನು ಅಳವಡಿಸಲು ಕೋರಲಾಯಿತು. | **Assistant Engineer-Street light** | **Pending** |
| | **ಕಂದಾಯ ಇಲಾಖೆ (Revinue Department)** | | |
| 1 | ಘನತ್ಯಾಜ್ಯ ನಿರ್ವಹಣೆಯ ವಾಹನಗಳ **Transit Point**ಗಾಗಿ ಸ್ಥಳ ನಿಗಧಿಪಡಿಸಲು ಸೂಚಿಸಲಾಯಿತು. | **Revinue Inspector** | ಬಿಡಿಎ ಆಯುಕ್ತರಿಗೆ ಬೈರಸಂದ್ರ ಗ್ರಾಮದ ಸರ್ವೆ ನಂ.144 ರ ಸ್ಥಳದ ವಿವರಣೆ ಕೋರಿ ಪತ್ರ ಬರೆಯಲಾಗಿರುತ್ತದೆ. |
| 2 | ಬಾಲಾಜಿ ಬಡಾವಣೆಯ ನಿವಾಸಿಗಳು ತಾವು ಸಲ್ಲಿಸಿರುವ ಮತದಾರರ ಗುರುತಿನ ಚೀಟಿ ಇದುವರೆವಿಗೂ ವಿತರಣೆಯಾಗಿರುವುದಿಲ್ಲ ಎಂದು ತಿಳಿಸಿದರು. | **Revinue Inspector** | **Pending** |
| | **Road Infra** | | |
| 1 | ಮಲ್ಲೇಶ್‌ಪಾಳ್ಯ ಹಾಗೂ ಕಗ್ಗದಾಸಪುರ ಮುಖ್ಯರಸ್ತೆಗಳಲ್ಲಿ ಹಲವು ಕಡೆ Slab ಗಳು ಮುರಿದು ಹೋಗಿದ್ದು, ಇವುಗಳನ್ನು ಬದಲಾಯಿಸಿ ಕೊಡಲು | **Assistant Engineer- Road Infra** | **Pending** |

ವಿಶೇಷ ಆಯುಕ್ತರು (ಘನತ್ಯಾಜ್ಯ ನಿ... ) ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ- 57 ಸಿ.ವಿ ರಾಮನ್‌ನಗರ

Scanned with CamScanner

| | | | |
|---|---|---|---|
| | ಕೋರಲಾಯಿತು. | | |
| 2 | ಹಳೇ ಮದ್ರಾಸ್ ರಸ್ತೆಯಲ್ಲಿ **Shoulder drain** ಗಳಲ್ಲಿ ಕಸ ಕಡ್ಡಿ/ಹೂಳು ತುಂಬಿದ್ದು, ಇದನ್ನು ತೆರವುಗೊಳಸಲು ಕೋರಲಾಯಿತು. | **Assistant Engineer- Road Infra** | ಪ್ರಗತಿಯಲ್ಲಿರುತ್ತದೆ. |
| | **ಕಲ್ಯಾಣ ಇಲಾಖೆ (Welfare Department)** | | |
| 1 | ಅರ್ಹ ಫಲಾನುಭವಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಕಡತವನ್ನು ಸಲ್ಲಿಸಲಾಗಿದ್ದು, ಇದುವರೆವಿಗೂ ವಿತರಣೆಯಾಗಿರುವುದಿಲ್ಲ. ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | **Welfare Department** | **Pending** |
| 2 | ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ಮಾಡುವ ಚಿಕ್ಕ-ಚಿಕ್ಕ ವ್ಯಾಪಾರಸ್ಥರಿಗೆ **vending zone**ಗಾಗಿ ಸ್ಥಳ ನಿಗಧಿಪಡಿಸಲು ತಿಳಿಸಲಾಯಿತು. | **Welfare Department** | **Pending** |
| | **ಬೃಹತ್ ನೀರುಗಾಲುವೆ (SWD)** | | |
| 1 | ಮಲ್ಲೇಶ್‌ಪಾಳ್ಯ 5ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆಯಲ್ಲಿರುವ ಬೃಹತ್ ನೀರುಗಾಲುವೆಯಲ್ಲಿ ಹೂಳನ್ನು ತೆರವುಗೊಳಸಲು ಕೋರಲಾಯಿತು. | **Assistant Engineer- SWD** | **Pending** |
| 2 | ವರ್ಸೋವಾ ಬಡಾವಣೆ ಹತ್ತಿರ ಇರುವ ಬೃಹತ್ ನೀರು ಗಾಲುವೆಯ ಸ್ವಲ್ಪಭಾಗ ಫೆನ್ಸಿಂಗ್ ಹಾಗೂ ಪೈಂಟಿಂಗ್ ಬಾಕಿ ಇದ್ದು, ಇದನ್ನು ಪೂರ್ಣಗೊಳಸುವಂತೆ ಕೋರಲಾಯಿತು. | **Assistant Engineer- SWD** | ಬೃಹತ್ ನೀರು ಗಾಲುವೆಯ ಹೂಳನ್ನು ತೆರವುಗೊಳಸಲು ಕೋರಲಾಯಿತು. |
| 3 | ಬಾಲಾಜಿ ಬಡಾವಣೆಯ 29ನೇ ಎ ಅಡ್ಡರಸ್ತೆಯಲ್ಲಿ ಖಾಸಗೀ ಸ್ವತ್ತಿನಲ್ಲಿ ಬೃಹತ್ ನೀರುಗಾಲುವೆಗೆ ತಲಪುವ ಚರಂಡಿಯನ್ನು ಅತಿಕ್ರಮಿಸಿಕೊಂಡು ಮನೆ ನಿರ್ಮಿಸುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | **Assistant Engineer- SWD** | **Pending** |
| 5 | ನಾಗವಾರ ಪಾಳ್ಯದಲ್ಲಿರುವ ಬೃಹತ್ ನೀರುಗಾಲುವೆಗೆ **Mesh**ನ್ನು ಅಳವಡಿಸುವಂತೆ ಕೋರಲಾಯಿತು. | **SWD** | **Pending** |
| | **Trafic Engineering cell** | | |
| 1 | ಹಳೇಮದ್ರಾಸ್ ರಸ್ತೆಯಲ್ಲಿ ಗೋಪಾಲನ್ ಮಾಲ್ ಹತ್ತಿರದಿಂದ ಎನ್.ಜಿ.ಇ.ಎಫ್ ಸಿಗ್ನಲ್‌ರವರೆಗೂ ಅಳವಡಿಸಿರುವ ಮ್ಯಿಡಿಯನ್‌ಗಳನ್ನು **Fix** ಮಾಡದೇ ಇರುವ ಕಾರಣ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಿದರು. | **AEE Trafic Engineering cell** | **Pending** |
| | **II.BWSSB** | | |
| 1 | 19ನೇ ಅಡ್ಡರಸ್ತೆ, ಕಗ್ಗದಾಸಪುರದಲ್ಲಿ ಕುಡಿಯುವ ನೀರಿನ ಸರಬರಾಜು ಸಮರ್ಪಕವಾಗಿಲ್ಲವೆಂದು ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | **Assistant Engineer- BWSSB** | ಕಗ್ಗದಾಸಪುರಕ್ಕೆ ನೀರು ಸರಬರಾಜು ಕಡಿಮೆ ಇದ್ದು, ಕಗ್ಗದಾಸಪುರ ಮುಖ್ಯರಸ್ತೆಯಲ್ಲಿರುವ ರೈಲ್ವೆ ಗೇಟ್ ಹತ್ತಿರ ಅಂಡರ್‌ಪಾಸ್ ಕಾಮಗಾರಿ ಪ್ರಗತಿಯಲ್ಲಿದ್ದು, ಪೂರ್ಣಗೊಂಡ ನಂತರ ಸಮರ್ಪಕವಾಗಿ ನೀರು ಸರಬರಾಜು ಮಾಡಲಾಗುವುದು. **(Long term)** |
| 2 | ಕಗ್ಗದಾಸಪುರಕ್ಕೆ ನೀರು ಸರಬರಾಜು ಕಡಿಮೆ ಇದ್ದು, ಕಗ್ಗದಾಸಪುರ ಮುಖ್ಯರಸ್ತೆಯಲ್ಲಿರುವ ರೈಲ್ವೇ ಗೇಟ್ ಹತ್ತಿರ ಅಂಡರ್‌ಪಾಸ್ ಕಾಮಗಾರಿ ಪ್ರಗತಿಯಲ್ಲಿದ್ದು, ಇದರ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಲಾಯಿತು. | **Assistant Engineer- BWSSB** | **Pending** |
| 3 | ಸುದ್ದಗುಂಟೆ ಪಾಳ್ಯದ ಮಹೇಶ್ವರಮ್ಮ ದೇವಸ್ಥಾನದ ಹತ್ತಿರ ಇರುವ ಬೋರ್‌ವೆಲ್‌ನ ಮೋಟರ್ ದುರಸ್ಥಿಗೊಳಸಿ ನೀರು ಬಳಕೆಯಾಗುವಂತೆ ಕ್ರಮ | **Assistant Engineer BWSSB** | **Pending** |

ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ಬಿಬಿಎಂಪಿ
ಹಾಗೂ ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ- 57 ಸಿ.ವಿ ರಾಮನ್‌ನಗರ

Scanned with CamScanner

| | | | |
|---|---|---|---|
| | ವಹಿಸಲು ಕೋರಲಾಯಿತು. | | |
| 4 | ನಾಗವಾರ ಪಾಳ್ಯ 8ನೇ ಅಡ್ಡರಸ್ತೆಯಲ್ಲಿ ಒಳಚರಂಡಿ ನೀರು ಸರಾಗವಾಗಿ ಹರಿಯದೆ ತುಂಬಾ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. | **Assistant Engineer-BWSSB** | ಪ್ರಗತಿಯಲ್ಲಿದೆ |
| 5 | ಕೇಂದ್ರ ಸರ್ಕಾರದ **prohibition of employment as manual scavengers and their re-habilitation act 2013** ರಂತೆ ಸಭೆಯಲ್ಲಿ ಕ್ರಮ ಕೈಗೊಳ್ಳಲು ಹಾಗೂ ಸಾರ್ವಜನಿಕರಿಗೆ ಸದರಿ ವಿಷಯದ ಬಗ್ಗೆ ಮಾಹಿತಿ ನೀಡಲಾಯಿತು. | **Assistant Engineer-BWSSB** | ತಿಳುವಳಿಕೆ ನೀಡಲಾಯಿತು. |
| | **BESCOM** | | |
| 1 | ರಹತ್‌ಬಾಗ್ ರಸ್ತೆಗಳಲ್ಲಿ ಹಾಗೂ ವರ್ತೂರು ಮುಖ್ಯರಸ್ತೆಗಳಲ್ಲಿ ಮತ್ತು ಕಗ್ಗದಾಸಪುರ ಮುಖ್ಯರಸ್ತೆಗಳಲ್ಲಿ ಬೆಸ್ಕಾಂ ವತಿಯಿಂದ ಭೂಗತ ಕೇಬಲ್ ಅಳವಡಿಕೆ ಕಾಮಗಾರಿಗೆ ರಸ್ತೆಗಳನ್ನು ಅಗೆಯಲಾಗಿದ್ದು. ತುರ್ತಾಗಿ ರಸ್ತೆ ದುರಸ್ಥಿ ಕಾಮಗಾರಿ ಕೈಗೊಳ್ಳಲು ಕೋರಲಾಯಿತು. | **Assistant Engineer Bescom** | 15 ದಿನಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂದು ತಿಳಿಸಿರುತ್ತಾರೆ. ಇದುವರೆವಿಗೂ ಕಾಮಗಾರಿಯನ್ನು ಪೂರ್ಣಗೊಳಿಸಿರುವುದಿಲ್ಲ. |
| | **ಸಂಚಾರಿ ಪೊಲೀಸ್ ಇಲಾಖೆ(Traffic police deparment)** | | |
| 1 | ನಾಗವಾರ ಪಾಳ್ಯ ಮುಖ್ಯರಸ್ತೆಯಲ್ಲಿ ತುಂಬಾ ಸಂಚಾರ ದಟ್ಟಣೆಯಾಗುತ್ತಿದ್ದು. ಸಮ-ಬೆಸ ದಿನಾಂಕಗಳಲ್ಲಿ ಒಂದು ಬದಿಯಲ್ಲಿ ಪಾರ್ಕಿಂಗ್ ಮಾಡುವ ವ್ಯವಸ್ಥೆಯನ್ನು ತರುವ ಬಗ್ಗೆ ಖಚಿತಪಡಿಸಲು ಕೋರಲಾಯಿತು. | **Traffic police** | **Pending** |

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | **ಪ್ರಾಥಮಿಕ ಆರೋಗ್ಯ ಕೇಂದ್ರ (PHC)** | |
| 1 | ಖಾಸಗೀ ಆಸ್ಪತ್ರೆಗಳಾದ ಅಭಯ ಹಸ್ತ ಹಾಗೂ ಕಂಫರ್ಟ್ ಆಸ್ಪತ್ರೆಗಳಲ್ಲಿ ಕೋವಿಡ್ ಲಸಿಕಾ ಕೇಂದ್ರವನ್ನು ಪ್ರಾರಂಭಿಸಿದ್ದು. ಲಸಿಕೆ ಪಡೆಯಲು ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿದವರ ವಿವರಗಳು ಸದರಿ ಖಾಸಗೀ ಆಸ್ಪತ್ರೆ ಹಾಗೂ ಭುವನೇಶ್ವರಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಿಗೆ ಮಾಹಿತಿ ದೊರೆಯದೆ ತೊಂದರೆಯಾಗುತ್ತಿದೆ ಎಂದು ತಿಳಿಸಲಾಯಿತು. | ವೈದ್ಯಾಧಿಕಾರಿಗಳು |
| | **ಘನತ್ಯಾಜ್ಯ ನಿರ್ವಹಣೆ (SWM)** | |
| 1 | ಕಗ್ಗದಾಸಪುರ ಮುಖ್ಯರಸ್ತೆಯ ಭುವನೇಶ್ವರಿನಗರ Entranceನಲ್ಲಿ ಇ-ಶೌಚಾಲಯ ನಿರ್ಮಿಸುವಂತೆ ಕೋರಲಾಯಿತು. | **Junior Health Inspector** |
| | **ಕಾಮಗಾರಿ ಇಲಾಖೆ (Engineering)** | |
| 1 | ಭುವನೇಶ್ವರಿನಗರ ಮುಖ್ಯರಸ್ತೆಯಲ್ಲಿರುವ ನಾಮಫಲಕಕ್ಕೆ ಹೆಸರನ್ನು ನಮೂದಿಸಿ ಪೈಂಟ್ ಮಾಡಿಕೊಡಲು ಕೋರಲಾಯಿತು. | **Assistant Engineer-BBMP** |
| 2 | ಭುವನೇಶ್ವರಿನಗರದಲ್ಲಿ ಸಿ.ಸಿ.ಕ್ಯಾಮೆರಾಗಳನ್ನು ಅಳವಡಿಸಲು ಕೋರಲಾಯಿತು. | **Assistant Engineer-BBMP** |
| 3 | ವಾರ್ಡ್‌ನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬಹುದಾದ ರಸ್ತೆ, ಚರಂಡಿ ಹಾಗೂ ಇನ್ನಿತರೆ ಕಾಮಗಾರಿಗಳ ಬಗ್ಗೆ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ವರದಿ ಸಲ್ಲಿಸಲಾಯಿತು. | **Assistant Engineer-BBMP** |
| | **BWSSB** | |
| 1 | ವರ್ತೂರು ಮುಖ್ಯರಸ್ತೆಯಲ್ಲಿರುವ ಒಳಚರಂಡಿಯ ಮ್ಯಾನ್‌ಹೋಲ್ ಮತ್ತು ಪೈಪ್‌ಗಳು ತುಂಬಾ ಹಳೆಯದಾಗಿದ್ದು. ಹಾಳಾಗಿರುತ್ತದೆ ಇದನ್ನು ಬದಲಾಯಿಸಿಕೊಡಲು ಕೋರಲಾಯಿತು. | **Assistant Engineer-BWSSB** |
| 2 | ಭುವನೇಶ್ವರಿನಗರದಲ್ಲಿ ಕುಡಿಯುವ ನೀರಿನ ಸರಬರಾಜು ಸಮರ್ಪಕವಾಗಿಲ್ಲವೆಂದು ತಿಳಿಸಲಾಯಿತು. | **Assistant Engineer-BWSSB** |

ವಿಶೇಷ ಆಯುಕ್ತರು.(ಘನತ್ಯಾಜ್ಯ ನಿರ್ವಹಣೆ)ಬಿಬಿಎಂಪಿ
[illegible] ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ 57 [illegible]

Scanned with CamScanner

| | | |
|---|---|---|
| 3 | ಕಗ್ಗದಾಸಪುರದ 19 ನೇ ಅಡ್ಡರಸ್ತೆಯ ಬಳಿ ರೈಲ್ವೇ ಟ್ರ್ಯಾಕ್ ಹತ್ತಿರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ವಾರ್ಡ್ ಸಂಖ್ಯೆ:81ರ ಕಡೆಯಿಂದ ಲಿಂಕಿಂಗ್ ಮಾಡುವ ಕಾಮಗಾರಿಯ ಬಗ್ಗೆ ವಿವರಗಳನ್ನು ನೀಡಲು ಸೂಚಿಸಲಾಯಿತು. | Assistant Engineer-BWSSB |
| 4 | ಭುವನೇಶ್ವರಿನಗರದಲ್ಲಿರುವ ಒಳಚರಂಡಿಯ ಮ್ಯಾನ್‌ಹೋಲ್‌ಗಳು ತುಂಬಾ ಶಿಥಿಲಗೊಂಡಿದ್ದು, ಇವುಗಳನ್ನು ಪರಿವೀಕ್ಷಣೆ ಮಾಡುವಂತೆ ಕೋರಲಾಯಿತು. | Assistant Engineer-BWSSB |
| 5 | ರಹತ್‌ಬಾಗ್ ಬಡಾವಣೆಯಲ್ಲಿ ಸುಮಾರು 17 ಅಪಾರ್ಟ್‌ಮೆಂಟ್ ಹಾಗೂ 15 ಒಂಟಿಮನೆಗಳಿದ್ದು, ಇವುಗಳಿಗೆ ಒಳಚರಂಡಿಯ ಸಂಪರ್ಕ ನೀಡಿರುವುದಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | Assistant Engineer-BWSSB |
| 6 | ಭುವನೇಶ್ವರಿನಗರದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಹಳೆಯ ಕಛೇರಿ ಇದ್ದು, ಸದರಿ ಕಛೇರಿಗೆ ನೀರು ಸರಬರಾಜು ಬಿಲ್‌ಗಳನ್ನು ಪಾವತಿಸಲು ಅನುಕೂಲವಾಗುವಂತೆ **Kiosk** ಅಳವಡಿಸಲು ಕೋರಲಾಯಿತು. | Assistant Engineer-BWSSB |
| | **BESCOM** | |
| 1 | ಕಗ್ಗದಾಸಪುರ ಮುಖ್ಯರಸ್ತೆ, ಹಾಗೂ ಮಲ್ಲೇಶ್‌ಪಾಳ್ಯ ರಸ್ತೆಗಳಲ್ಲಿ ಬೆಸ್ಕಾಂ ವತಿಯಿಂದ ಭೂಗತ ಕೇಬಲ್ ಅಳವಡಿಕೆ ಕಾಮಗಾರಿಗೆ ರಸ್ತೆಗಳನ್ನು ಅಗೆಯಲಾಗಿದ್ದು, ತುರ್ತಾಗಿ ರಸ್ತೆ ದುರಸ್ಥಿ ಕಾಮಗಾರಿ ಕೈಗೊಳ್ಳಲು ಕೋರಲಾಯಿತು ಹಾಗೂ **RMU** ಯೂನಿಟ್‌ಗಳನ್ನು ತುರ್ತಾಗಿ ಅಳವಡಿಸಲು ಕೋರಲಾಯಿತು. | Assistant Engineer-BESCOM |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

ಕಾರ್ಯದರ್ಶಿಗಳು AE.
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ:57-ಸಿ.ವಿ.ರಾಮನ್‌ನಗರ

ಅಧ್ಯಕ್ಷರು
ವಿಶೇಷ ಆಯುಕ್ತರು(ಘನತ್ಯಾಜ್ಯ ನಿರ್ವಹಣೆ)
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:57-ಸಿ.ವಿ.ರಾಮನ್‌ನಗರ

ವಿಶೇಷ ಆಯುಕ್ತರು ಬಿಬಿಎಂಪಿ
ವಾರ್ಡ್ ಸಂಖ್ಯೆ - 57 ಸಿ.ವಿ ರಾಮನ್‌ನಗರ

Scanned with CamScanner